



# ಚಿವುಟಿದಷ್ಟೂ ಚಿಗುರುತ್ತಿದೆ ಲಿಂಗ ತಾರತಮ್ಯ



**ಕೆಲವೇ ಕೆಲವು ಅತ್ಯಾಚಾರ ಮತ್ತು ಹತ್ಯೆಯ ಪ್ರಕರಣಗಳಿಗೆ ತೀವ್ರವಾಗಿ ಮಿಡಿಯುವ ಸಮಾಜ, ಹೆಣ್ಣಿನ ಕುರಿತಂತೆ ತನ್ನ 'ಚಿಂತನಾ ಕ್ರಮ'ದ ಬದಲಾವಣೆಯ ತಂಟೆಗೆ ಮಾತ್ರ ಹೋಗುತ್ತಿಲ್ಲ.**

■ ಎಚ್.ಕೆ. ಶರತ್

ಮದುವೆ ಆಗಿ ಎರಡು ವರ್ಷಗಳಾದರೂ ಮಗುವಿಗೆ ತಂದೆಯಾಗದ ಸ್ನೇಹಿತ, ತನ್ನ ಸಂಬಂಧಿಕರು ಹಾಗೂ ಸುತ್ತಲಿನವರ ತರಹೇವಾರಿ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಹೈರಾಣಾಗಿದ್ದ. ಇತ್ತೀಚೆಗೆ ಅವನು ಹೆಣ್ಣುಮಗುವಿನ ತಂದೆಯೂ ಆದ. ಸಹಜವಾಗಿಯೇ ತನ್ನ ಸಂಭ್ರಮವನ್ನು ಆಪ್ತರಿಗೆ ಸಿಹಿ ಹಂಚುವ ಮೂಲಕ ತೋರ್ಪಡಿಸಿಕೊಂಡ. ಹೀಗೆ ತಾನು ಕಾರ್ಯನಿರ್ವಹಿಸುವ ಕಾಲೇಜಿನಲ್ಲಿ ಸಹದ್ಯೋಗಿಗಳಿಗೆ ಸಿಹಿ ಹಂಚುವ ವೇಳೆ ಅವನ ಕಿವಿಗೆ ಬಿದ್ದ ಮಾತುಗಳು ಅವನಲ್ಲಿ ಈ ಸಮಾಜದ ಕುರಿತು ಅಸಹನೆ ಮೂಡಿಸುವ ರೀತಿಯಲ್ಲಿದ್ದವು. ಸಿಹಿ ಪಡೆದವರೊಬ್ಬರು 'ಹೆಣ್ಣು ಮಗು ಹುಟ್ಟಿದ್ರೂ ಹೀಗೆ ಸ್ವೀಟ್ಸ್ ಹಂಚ್ತಾರ!' ಎಂದು ವ್ಯಂಗ್ಯದ ನಗೆ ಬೀರಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ ಮತ್ತೊಬ್ಬರು, 'ಈಗ ಹೆಣ್ಣೋ ಗಂಡೋ ಯಾವುದಾದರೇನು ಬಿಡಿ' ಎಂಬ ತೋರಿಕೆಯ ಸಮಾಧಾನದ ಮಾತು ಆಡಿದ್ದರು. ಮಗುವಾದರೆ ಸಾಕು ಎಂಬ ಮನಸ್ಥಿತಿಯಲ್ಲಿದ್ದ ಸ್ನೇಹಿತನಿಗೆ ಸಹಜವಾಗಿಯೇ ಇವರ ಮಾತುಗಳನ್ನು ಅರಗಿಸಿಕೊಳ್ಳುವುದು ಕಷ್ಟವಾಯಿತು.

ವರ್ಷದ ಹಿಂದೆ ವಿದ್ಯಾರ್ಥಿನಿಯೊಬ್ಬಳು ತರಗತಿಗೆ ಬರುವುದನ್ನೇ ಬಿಟ್ಟಿದ್ದಳು. ಕಾಲೇಜಿಗೆ ಹೋಗುವುದಾಗಿ ಪ್ರತಿ ದಿನ ಮನೆ ಬಿಡುವ ತಮ್ಮ ಮಗಳು, ತರಗತಿಗಳಿಗೆ ಗೈರು ಹಾಜರಾಗುತ್ತಿರುವ ವಿಷಯ ತಿಳಿದು ಆ ವಿದ್ಯಾರ್ಥಿನಿಯ ಪೋಷಕರು ವಿಚಾರಿಸಲು ಕಾಲೇಜಿಗೆ ಬಂದಿದ್ದರು. ಆ ವೇಳೆ ವಿದ್ಯಾರ್ಥಿನಿಯ ತಾಯಿ ಹೇಳಿದ ಮಾತು ಸಮಾಜದಲ್ಲಿ ಅದೂ ಸುಶಿಕ್ಷಿತ ವಲಯದಲ್ಲೇ ಇನ್ನೂ ಬೇರೂರಿರುವ ಮನಸ್ಥಿತಿಗೆ ಕನ್ನಡಿ ಹಿಡಿಯಿತಷ್ಟೆ.

'ನಮ್ಮ ಮಗಳಿಗೆ ಬೆಂಗ್ಳೂರಲ್ಲಿ ಎಂಜಿನಿಯರಿಂಗ್ ಓದ್ಬೇಕು ಅನ್ನೋ ಆಸೆ ಇತ್ತು. ಆದ್ರೆ ಇವ್ರ ಅಪ್ಪ, ಮಗ್ಳು ನಮ್ ಕಣ್ ಮುಂದೇನೆ ಇರ್ಲಿ. ಹೆಣ್ಣುಮಕ್ಳನ್ನ ಬೇರೆ ಕಡೆ ಕಳ್ಸೋಕೆ ನಾನು ತಯಾರಿಲ್ಲ ಅಂತ ಹೇಳಿ ಮಗಳಿಗೆ ಇಷ್ಟವಿಲ್ಲದಿದ್ದರೂ ನಾವಿರುವ ಊರಿನ ಕಾಲೇಜಿಗೆ ಸೇರಿಸಿದ್ರು' ಎಂದು ಅಳಲು ತೋಡಿಕೊಂಡರು.

ಸದ್ಯ ಉತ್ತರಪ್ರದೇಶದಲ್ಲಿ ಕೃಷಿ ವಿಜ್ಞಾನದ ಸ್ನಾತಕೋತ್ತರ ಪದವಿ ಓದುತ್ತಿರುವ ನೆರೆಹೊರೆಯ ಹುಡುಗಿಯ ತಾಯಿ ಆಡಿದ ಮಾತು ಕೂಡ ಮೇಲಿನ ಮನಸ್ಥಿತಿಗೆ ಪೂರಕವಾಗಿಯೇ ಇತ್ತು. 'ನಮ್ ಮಗ್ಳಿಗೆ ಪಿಎಚ್.ಡಿ. ಮಾಡ್ಬೇಕು ಅನ್ನೋ ಆಸೆ ಇದೆ. ಆದ್ರೆ ನಮ್ ಮನೆಯವ್ರು ಮಾತ್ರ ಮಗ್ಳನ್ನ ಮತ್ತೆ ಬೇರೆ ರಾಜ್ಯಕ್ಕೆ ಕಳ್ಸೋಕೆ ತಯಾರಿಲ್ಲ. ಬೆಂಗ್ಳೂರಲ್ಲಿ ಪಿಎಚ್.ಡಿ. ಮಾಡೋಕೆ ಅವಕಾಶ ಸಿಕ್ರೆ ಮಾತ್ರ ಕಳುಸ್ತೀವಿ' ಅಂದ್ರು. ಅದರೊಂದಿಗೆ ಎಂ.ಎಸ್. ಮಾಡಲು ತಮ್ಮ ಮಗಳನ್ನು ಜರ್ಮನಿಗೆ ಕಳಿಸಿರುವ ಪಕ್ಕದ ಮನೆಯವರನ್ನು ಉದ್ದೇಶಿಸಿ, 'ಹೆಣ್ ಮಕ್ಳನ್ನ ಹೀಗೆ ಮದ್ವೇಗ್ ಮುಂಚೆನೆ ಬೇರೆ ದೇಶಕ್ಕೆ ಕಳ್ಸೋದು ಸರಿ ಅಲ್ಲ. ಹಾಗೊಂದು ವೇಳೆ ಫಾರಿನ್‌ನಲ್ಲೇ ಓದ್ಬೇಕು ಅಂತಿದ್ರೆ ಮದ್ವೆ ಆದ್ಮೇಲೆ ಗಂಡ ಕಳ್ಸಿದ್ರೆ ಓದ್ಲಿ' ಎಂಬ ಮಾತನ್ನೂ ಸೇರಿಸಿದ್ರು. ಹೀಗೆ ಹೇಳಿದವರು ವೃತ್ತಿಯಲ್ಲಿ ಶಿಕ್ಷಕಿ.

ಮೇಲಿನ ನಿದರ್ಶನಗಳು ನಮ್ಮ ದೈನಂದಿನ ಬದುಕಿನಲ್ಲಿ ತೀರಾ ಸಹಜವಾಗಿ ನಡೆಯುವ ಮಾತುಕತೆಗಳೇ ಆಗಿವೆ. ಲಿಂಗ ಸಮಾನತೆ ಮತ್ತು ಹೆಣ್ಣಿಗೆ ಸಿಕ್ಕಿರುವ ಸ್ವಾತಂತ್ರ್ಯದ ಕುರಿತು ಮಾತನಾಡುವಾಗ ಸುಲಭಕ್ಕೆ ಬಂದುಬಿಡುವ, 'ಹಿಂದೆ ಹಾಗಿತ್ತು, ಈಗ ಹಾಗೇನಿಲ್ಲ' ಎನ್ನುವ ಗ್ರಹಿಕೆ ಸ್ವೀಕಾರಾರ್ಹವಾದುದೇ ಎಂಬ ಪ್ರಶ್ನೆ ಮೂಡಲು ಇಂತಹ ಮಾತುಕತೆಗಳಾದರೂ ನಮ್ಮನ್ನು ಪ್ರೇರೇಪಿಸಬೇಕಲ್ಲವೇ?

ಸಮಾಜ ಮೇಲುನೋಟಕ್ಕೆ ತಾನು ತೊರೆದಿರುವಂತೆ ಬಿಂಬಿಸಿಕೊಳ್ಳುವ ಜಾತಿ, ಧರ್ಮ, ವರ್ಣ, ವರ್ಗ ಮತ್ತು ಲಿಂಗಾಧಾರಿತ ತಾರತಮ್ಯದ ಬೇರುಗಳು ಅದೆಷ್ಟು ಆಳಕ್ಕೆ ಚಾಚಿಕೊಂಡಿವೆ ಎಂಬುದನ್ನು ಅರಿಯಲು ನಮ್ಮಲ್ಲಿನ ಆತ್ಮವಂಚಕ ಪ್ರವೃತ್ತಿಯನ್ನು ತೊರೆದರೆ ಸಾಕೇನೊ! ಕೆಲವೇ ಕೆಲವು ಅತ್ಯಾಚಾರ ಮತ್ತು ಹತ್ಯೆಯ ಪ್ರಕರಣಗಳಿಗೆ ತೀವ್ರವಾಗಿ ಮಿಡಿಯುವ ಸಮಾಜ, ನಿಜಕ್ಕೂ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಿರುವ 'ಮನಸ್ಥಿತಿ' ಮತ್ತು 'ಚಿಂತನಾ ಕ್ರಮ'ದ ತಂಟೆಗೆ ಹೋಗದೆ, ಒಂದಿಬ್ಬರಿಗೆ ಗಲ್ಲು ಶಿಕ್ಷೆ ವಿಧಿಸುವ ಮೂಲಕ ಅಥವಾ ಅತಿ ಶೀಘ್ರವಾಗಿ ಬೇರೆ ಮಾರ್ಗದಲ್ಲಾದರೂ ಸರಿ ಕೊಂದು ಹಾಕುವುದರಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಭಾವಿಸುವುದು ಆತ್ಮವಂಚನೆ ಅನಿಸುವುದಿಲ್ಲವೇ? ಹೆಣ್ಣುಮಕ್ಕಳನ್ನು ಪೂಜಿಸುವ, ಗೌರವಿಸುವ ಸಂಸ್ಕೃತಿ ನಮ್ಮದು ಅಂತೆಲ್ಲ ಬೀಗುವ ಮುನ್ನ ಹೆಣ್ಣನ್ನು ಸಹಜೀವಿ ಎಂದು ಭಾವಿಸಿ ಸಮಾನವಾಗಿ ಕಾಣುವ ಸಂಯಮ ದಕ್ಕಿಸಿಕೊಳ್ಳುವುದರೆಡೆಗೆ ನಾವು ತುಡಿಯಬೇಕಲ್ಲವೇ?

ಹೆಣ್ಣಿನ ಕುರಿತಾದ ಧೋರಣೆಯಲ್ಲಿ ಯಥಾಸ್ಥಿತಿ ಕಾಯ್ದುಕೊಂಡು, ನಂಬಿಕೆ, ಸಂಪ್ರದಾಯ, ಸಂಸ್ಕೃತಿ, ಸುರಕ್ಷತೆಯ ಗುರಾಣಿ ಹಿಡಿದು ತಾರತಮ್ಯದ ನೆಲೆಗಳೆಲ್ಲವೂ ಹಾಗೆಯೇ ಇರುವಂತೆ ನೋಡಿಕೊಂಡು ಒಂದಷ್ಟು ಜನರನ್ನು ಶಿಕ್ಷಿಸಿದ ಮಾತ್ರಕ್ಕೆ ದೌರ್ಜನ್ಯ ಎಸಗುವ ಮನಸ್ಥಿತಿ ಬದಲಾಗಿ ಬಿಡುತ್ತದೆ ಎಂದು ಭಾವಿಸುವುದು ಏನನ್ನು ಸೂಚಿಸುತ್ತದೆ?

ಪ್ರತಿ ಬದಲಾವಣೆಯೂ ಸಾಕಷ್ಟು ಸಮಯ ಬೇಡುವುದರಿಂದ ಸುಧಾರಣೆಯ ಚಕ್ರ ಒಂದು ಸುತ್ತು ಸುತ್ತಲು ಮತ್ತಷ್ಟು ಕಾಲವಾದರೂ ಬೇಕೆಂಬ ಆಶಾಭಾವ ಹೊಂದಲು ಸಕಾರಣಗಳಿದ್ದವು. ಆದರೆ, ವರ್ತಮಾನದ ಸಂಗತಿಗಳನ್ನು ಗಮನಿಸಿದರೆ, ಲಿಂಗಾಧಾರಿತ ಸಮಾನತೆಯ ಚಕ್ರವೂ ಮುಂಬರುವ ದಿನಗಳಲ್ಲಿ ಹಿಮ್ಮುಖ ಚಲನೆ ಕಂಡುಕೊಂಡರೆ ಅಚ್ಚರಿಪಡುವಂತಹದ್ದೇನೂ ಇಲ್ಲ. ಯಾಕೆಂದರೆ, ಹಲವು ತಾರತಮ್ಯಗಳ ಮೂಲವೂ ಆಗಿರುವ ಚಿಂತನಾಕ್ರಮವನ್ನೇ ಮೌಲ್ಯವೆಂದು ಸಮಾಜ ಸ್ವೀಕರಿಸುತ್ತಿದೆ. ■